

ಬಿಸಿಲು
ಬೆಳದಿಂಗಳು

ಡಾ. ಶಿವಮೂರ್ತಿ ಶಿವಾಚಾರ್ಯ ಸ್ವಾಮೀಜಿ
swamiji@taralabalu.org

# ಸತ್ಯಮೇವ ಜಯತೇ!....

**ಸ**ಭೆಸಮಾರಂಭಗಳಲ್ಲಿ ಭಾಷಣಕಾರರು ಹೇಳುವ ಒಂದು ರೋಚಕ ಕಥಾನಕ ಹೀಗಿದೆ: ಒಂದು ಮನೆಯ ಜಗುಲಿಯ ಮೇಲೆ ಮೂವರು ವೃದ್ಧರು ಕುಳಿತಿದ್ದರು. ಸುಸಂಸ್ಕೃತ ಗೃಹಿಣಿಯಾದ ಮನೆಯೊಡತಿ ಅವರಿಗೆ ಒಳಗೆ ಬರಲು ಬಿನ್ನವಿಸಿಕೊಂಡಳು. ನಿನ್ನ ಪತಿ ಬಂದಮೇಲೆ ಬರುವುದಾಗಿ ಹೇಳಿ ಆ ವೃದ್ಧರು ಅಲ್ಲಿಯೇ ಕುಳಿತುಕೊಂಡರು. ಸ್ವಲ್ಪ ಹೊತ್ತಿನಲ್ಲಿಯೇ ಮನೆಯ ಯಜಮಾನ ಬಂದ. ಹೊರಗೆ ಕುಳಿತಿದ್ದ ವೃದ್ಧರನ್ನು ನೋಡಿ 'ಯಾರು ನೀವು, ಏನು ಬಂದಿರಿ, ಒಳಗೆ ಬನ್ನಿ' ಎಂದು ಕರೆದ. ಅವರು ನಮ್ಮ ಹೆಸರು 'ಸತ್ಯ, ಸಂಪತ್ತು ಮತ್ತು ಯಶಸ್ಸು. ನಮ್ಮಲ್ಲಿ ಯಾರಾದರೂ ಒಬ್ಬರು ಮಾತ್ರ ಬರಲು ಸಾಧ್ಯ, ನಿಮಗೆ ಯಾರು ಬೇಕು, ಹೇಳಿ' ಎಂದು ಕೇಳಿದರಂತೆ. ಮನೆಯ ಯಜಮಾನ ಮತ್ತು ಆತನ ಪತ್ನಿ ತಕ್ಷಣವೇ ಏನು ಹೇಳಬೇಕೆಂದು ತಿಳಿಯದೆ ಚಿಂತಾಮಗ್ನರಾದರು. ಜೀವನದಲ್ಲಿ ಸುಖವಾಗಿರಬೇಕೆಂದರೆ ಸಂಪತ್ತು ಬೇಕು, ಮನೆ ಕಟ್ಟಬೇಕೆಂದರೆ ದುಡ್ಡು ಬೇಕು, ಚುನಾವಣೆಗೆ ನಿಲ್ಲಬೇಕೆಂದರೆ ದುಡ್ಡು ಬೇಕು. ಮಕ್ಕಳನ್ನು ಒಳ್ಳೆಯ ಶಾಲೆಗೆ ಸೇರಿಸಬೇಕೆಂದರೆ ದುಡ್ಡು ಬೇಕು, ಆಫೀಸುಗಳಲ್ಲಿ ಕೆಲಸವಾಗಬೇಕೆಂದರೆ ದುಡ್ಡು ಬೇಕು, ಮಗಳನ್ನು ಮದುವೆಮಾಡಿಕೊಡಬೇಕೆಂದರೆ ದುಡ್ಡು ಬೇಕು, ಜೀವನದಲ್ಲಿ ಯಶಸ್ಸು ದೊರೆಯಬೇಕೆಂದರೂ ಸಂಪತ್ತು ಬೇಕು. ಇಂದಿನ ಸಮಾಜದಲ್ಲಿ ದುಡ್ಡಿದ್ದವರಿಗೇ ಹೆಚ್ಚಿನ ಮಾನಸಮ್ಮಾನ. 'ಸರ್ವೇ ಗುಣಾಃ ಕಾಂಚನಮಾಶ್ರಯಂತಿ'. ಆದಕಾರಣ ಸಂಪತ್ತನ್ನು ಮನೆಯೊಳಗೆ ಬರಮಾಡಿಕೊಳ್ಳೋಣ ಎಂದು ಆಲೋಚಿಸುತ್ತಿದ್ದಂತೆಯೇ ಶಾಲೆಗೆ ಹೋಗಿದ್ದ ಅವರ ಪುಟ್ಟ ಮಗಳು 'ಸತ್ಯವೇ ನಮ್ಮ ತಾಯಿತಂದೆ, ಸತ್ಯವೇ ನಮ್ಮ ಬಂಧುಬಳಗ, ಸತ್ಯವಾಕ್ಯದಿ ತಪ್ಪಿ ನಡೆದರೆ ಮೆಚ್ಚನಾ ಜಗದೀಶನು' ಎಂದು ಶಾಲೆಯಲ್ಲಿ ಹೇಳಿಕೊಟ್ಟಿದ್ದ ಗೋವಿನ ಹಾಡನ್ನು ಜೋರಾಗಿ ಹೇಳುತ್ತಾ ಮನೆಯೊಳಗೆ ಕಾಲಿಟ್ಟಳು. ಅದನ್ನು ಕೇಳಿಸಿಕೊಂಡ ಬಾಲಕಿಯ ತಂದೆತಾಯಿಗಳು ತಮ್ಮ ಮನಸ್ಸನ್ನು ಬದಲಾಯಿಸಿ ಆ ನೀತಿಪಾಠ ಬೋಧಿಸಿದಂತೆ ಸತ್ಯವನ್ನೇ ಬರಮಾಡಿಕೊಳ್ಳೋಣವೆಂದು ತೀರ್ಮಾನಿಸಿಕೊಂಡು ಹೊರಗೆ ಬಂದು ಸತ್ಯವನ್ನು ಒಳಗೆ ಬರಲು ಕೇಳಿಕೊಂಡರು. ಆಗ ಮೂವರೂ ವೃದ್ಧರು ಒಟ್ಟಿಗೆ ಒಳಗೆ ಹೋದರು. ಇದೇನಿದು ಒಬ್ಬರು ಮಾತ್ರ ಬರುವುದಾಗಿ ಹೇಳಿದ್ದಿರಿ ಈಗ ಮೂವರೂ ಒಟ್ಟಿಗೆ ಬರುತ್ತಿದ್ದೀರಲ್ಲಾ ಎಂದು ಮನೆಯ ಯಜಮಾನ ಕೇಳಿದನು: ಅದಕ್ಕೆ ಆ ವೃದ್ಧರು ಹೇಳಿದರಂತೆ: 'ಎಲ್ಲಿ ಸತ್ಯ ಇರುತ್ತದೆಯೋ ಅಲ್ಲಿ ಸಂಪತ್ತು ಮತ್ತು ಯಶಸ್ಸು ಒಟ್ಟಿಗೆ ಇರುತ್ತವೆ!' ಈ ಕಥೆಯನ್ನು ಭಾಷಣಕಾರರು ಹೇಳಿದಾಕ್ಷಣ ಸಭಿಕರ ಮನಸ್ಸಿನಲ್ಲಿ ವಿದ್ಯುತ್‌ಸಂಚಾರವಾದಂತಾಗಿ ಪುಳಕಗೊಂಡು ಚಪ್ಪಾಳೆ ತಟ್ಟುತ್ತಾರೆ. ಹರ್ಷಗೊಂಡ ಭಾಷಣಕಾರರು ಕಾಲದ ಪರಿವೆಯಿಲ್ಲದೆ ಭಾಷಣದ 'ಸೋನೆಮಳೆ' ಸುರಿಸಲಾರಂಭಿಸುತ್ತಾರೆ. ಇಬ್ಬರೂ ಆಳವಾದ ಚಿಂತನೆಯನ್ನು ಮಾಡುವ ಗೋಜಿಗೆ ಹೋಗುವುದಿಲ್ಲ. ಪರದೇಶಗಳಲ್ಲಿ ಯೋಗದ ಹೆಸರು ಕೇಳಿದರೆ ಸಾಕು ವಿದೇಶೀಯರು ಮಂತ್ರಮುಗ್ಧರಾಗಿ ಕಣ್ಮುಚ್ಚಿ 'ಯೋಗನಿದ್ರೆ'ಗೆ ಸರಿಯುವಂತೆ, ಭಾರತೀಯರು ಸತ್ಯ, ಧರ್ಮಗಳ ಶಬ್ದ ಕೇಳಿದಾಕ್ಷಣ ಭಾವಪರವಶರಾಗಿಬಿಡುತ್ತಾರೆ.

70ರ ದಶಕದಲ್ಲಿ ವಿದೇಶಗಳಲ್ಲಿ ಭಾರತದಿಂದ ಬರುವ ಯೋಗಿಗಳಿಗೆ ವಿಶೇಷ ಮನ್ನಣೆ ಇತ್ತು. ಯೋಗದ ಹೆಸರಿನಲ್ಲಿರುವ ವಸ್ತುಗಳಿಗೆ ಮಾರುಕಟ್ಟೆಯಲ್ಲಿ ಭಾರೀ ಬೇಡಿಕೆಯಿತ್ತು. ಆಗ ವಿಯೆನ್ನಾ ವಿಶ್ವವಿದ್ಯಾನಿಲಯದಲ್ಲಿ ಓದುತ್ತಿದ್ದ ನಾವು ಸಮೀಪದಲ್ಲಿದ್ದ ಒಂದು ಪುಸ್ತಕದ ಅಂಗಡಿಗೆ ಹೋಗಿದ್ದೆವು. ಒಳಗೆ ಪ್ರವೇಶಿಸುತ್ತಿದ್ದಂತೆಯೇ New Arrivals ಎಂಬ ಸೂಚನಾಫಲಕದಡಿಯಲ್ಲಿ ಹೊಸದಾಗಿ ಜರ್ಮನ್ ಭಾಷೆಯಲ್ಲಿ ಪ್ರಕಟಗೊಂಡಿದ್ದ 'Yoga-Kochbuch' (ಯೋಗಪಾಕಶಾಸ್ತ್ರ) ಎಂಬ ಶಿರೋನಾಮೆಯ ಒಂದು ಪುಸ್ತಕ ನಮ್ಮ ಕಣ್ಣಿಗೆ ಬಿತ್ತು. ಶಾರೀರಿಕವಾಗಿ ಮತ್ತು ಮಾನಸಿಕವಾಗಿ ಸದೃಢಕಾಯರಾಗಿ ಆರೋಗ್ಯವಂತರಾಗಿರಲು ಅನೇಕ yogic diet ಗಳನ್ನು ಕೊಟ್ಟಿರುವುದಾಗಿ ಪುಸ್ತಕದ ಮುಖಪುಟದಲ್ಲಿ ನಮೂದಿಸಲಾಗಿತ್ತು. ಕುತೂಹಲದಿಂದ ಆ ಪುಸ್ತಕವನ್ನು ಕೈಗೆತ್ತಿಕೊಂಡು ಅದರ ಪುಟಗಳನ್ನು ತಿರುವಿಹಾಕಿದಾಗ ನಮಗೆ ಅಲ್ಲಿ ಕಂಡಬಂದದ್ದು ಇಡ್ಲಿ, ದೋಸೆ, ವಡೆ, ಸಾಂಬಾರ್ ಇತ್ಯಾದಿ ಭಾರತೀಯ ಸಸ್ಯಾಹಾರದ ವಿಶೇಷ ಭಕ್ಷ್ಯಭೋಜ್ಯಗಳನ್ನು ರುಚಿರುಚಿಯಾಗಿ ತಯಾರುಮಾಡುವ ಬಗೆ ಹೇಗೆ ಎಂಬ ವಿವರಗಳು! ಪುಸ್ತಕವನ್ನು ಖರೀದಿಸಲು ಆಗ ಜೇಬಿನಲ್ಲಿ ಸಾಕಷ್ಟು ಹಣವಿರಲಿಲ್ಲ. ಮಾರನೆಯ ದಿನ ಹಣ ತೆಗೆದುಕೊಂಡು ಕೊಳ್ಳಲು ಹೋದರೆ ಆ ಪುಸ್ತಕದ ಎಲ್ಲ ಪ್ರತಿಗಳು ಆಗಲೇ ಮಾರಾಟವಾಗಿದ್ದವು!

ಮೇಲೆ ನಿರೂಪಿಸಿದ ಸತ್ಯ, ಸಂಪತ್ತು, ಶ್ರೇಯಸ್ಸಿನ ಕಥೆಯ ವಿಶ್ಲೇಷಣೆಗೆ ಬರೋಣ. ಈ ಕಾಲ್ಪನಿಕ ಕಥೆಯು ಎಷ್ಟು ರೋಚಕವಾಗಿದೆಯೋ ಅಷ್ಟೇ ವಾಸ್ತವಿಕತೆಯಿಂದ ದೂರವಾಗಿದೆ. ಸತ್ಯ ಹೇಳಿದಾಕ್ಷಣ ಸಂಪತ್ತು ಮತ್ತು ಯಶಸ್ಸು ಆ ವೃದ್ಧರಂತೆ ಕೂಡಲೇ ಬೆನ್ನ ಹಿಂದೆ ಬಂದುಬಿಡುತ್ತವೆ ಎಂದು ತಿಳಿದುಕೊಳ್ಳುವುದು ಭ್ರಮೆ. ಅಸತ್ಯಮಾರ್ಗವನ್ನು ಅನುಸರಿಸುವವರಿಗೆ ಸಂಪತ್ತು ಮತ್ತು ಶ್ರೇಯಸ್ಸು ಬೇಗನೆ ಬಂದಂತೆ ಸತ್ಯಮಾರ್ಗದಲ್ಲಿ ನಡೆಯುವವರಿಗೆ ಬರುವುದಿಲ್ಲ. ಆದರೆ ಒಂದು ಮೂಲಭೂತ ವ್ಯತ್ಯಾಸವೆಂದರೆ ಅಸತ್ಯಮಾರ್ಗದಿಂದ ಗಳಿಸಿದವರಿಗೆ ಸುಖ-ಸಂತೋಷಗಳಿರುವುದಿಲ್ಲ. ಮಲಗಲು ಸುಪ್ಪತ್ತಿಗೆ ಇದ್ದರೂ ನಿದ್ದೆಗುಳಿಗೆ ನುಂಗದೆ ನಿದ್ರೆ ಬರುವುದಿಲ್ಲ. ಸತ್ಯಮಾರ್ಗದಿಂದ ಗಳಿಸಿದವರಿಗೆ ಶಾಶ್ವತ ಸಂತೋಷವಿರುತ್ತದೆ. ಎಷ್ಟೇ ಕಷ್ಟಕಾರ್ಪಣ್ಯಗಳು ಬಂದರೂ ಅವುಗಳನ್ನು ಎದುರಿಸುವ ಆತ್ಮಸ್ಥೈರ್ಯವಿರುತ್ತದೆ. "When money speaks, Truth is silent" (ಹಣ ಜಣಜಣಿಸುವಾಗ ಸತ್ಯ ಮೌನವಾಗಿರುತ್ತದೆ) ಎಂಬ ಗಾದೆ ಮಾತೊಂದು

ರಷ್ಯನ್ ಭಾಷೆಯಲ್ಲಿದೆ. ಸತ್ಯ ಮತ್ತು ಸಂಪತ್ತು/ಶ್ರೇಯಸ್ಸುಗಳ ಮಧ್ಯೆ ಬಹಳ ಅಂತರವಿದೆ. ಸತ್ಯಪಥ ಒಂದು ರೈಲ್ವೆಹಳಿಯಾದರೆ, ಸತ್ಯ ಅದರ ಮೇಲೆ ಕಟ್ಟುನಿಟ್ಟಾಗಿ ಕ್ರಮಿಸುವ ರೈಲ್ವೆ ಇಂಜಿನ್ ಇದ್ದಂತೆ. ಸಂಪತ್ತು ಮತ್ತು ಶ್ರೇಯಸ್ಸು ಅದರ ಹಿಂಬದಿಯಲ್ಲಿದ್ದರೂ ಅವು ಕೊಟ್ಟಕೊನೆಯಲ್ಲಿ ಹಸಿರುನಿಶಾನೆ ತೋರಿಸುವ ಗಾರ್ಡುಗಳ ಬೋಗಿ ಇದ್ದಂತೆ. ಇವೆರಡರ ಮಧ್ಯೆ ಒಂದರ ಹಿಂದೊಂದು ತಗಲುಹಾಕಿಕೊಂಡಿರುವ ಹತ್ತಾರು ಬೋಗಿಗಳೇ ನಕ್ಷತ್ರಕನಂತೆ ಸತ್ಯಸಂಧನ ಬೆನ್ನ ಹಿಂದೆ ಒಂದರ ಮೇಲೊಂದು ಬೀಳುವ ಕಷ್ಟಗಳ ಸರಮಾಲೆಗಳು. ಸತ್ಯಸಂಧನು ಅವುಗಳನ್ನು ಹೊತ್ತು ಯಶಸ್ವಿಯಾಗಿ ಗುರಿ ಮುಟ್ಟಿದ ಮೇಲೆಯೇ ಜೀವನವೆಂಬ ಪಯಣದಲ್ಲಿ ಯಶಸ್ಸಿನ ಹಸಿರುನಿಶಾನೆ ಕಾಣಿಸುವುದು. ದೇವರ ದಾಸಿಮಯ್ಯನವರ ಈ ಕೆಳಗಿನ ವಚನವನ್ನು ಗಮನಿಸಿ:

> **ಹರ ತನ್ನ ಭಕ್ತರ ತಿರಿವಂತೆ ಮಾಡುವ**
> **ಒರೆದು ನೋಡುವ ಸುವರ್ಣದ ಚಿನ್ನದಂತೆ**
> **ಅರೆದು ನೋಡುವ ಚಂದನದಂತೆ**
> **ಅರಿದು ನೋಡುವ ಕಬ್ಬಿನ ಕೋಲಿನಂತೆ**
> **ಬೆದರದೆ ಬೆಚ್ಚದೆ ಇದ್ದಡೆ**
> **ಕರವಿಡಿದೆತ್ತಿಕೊಂಬ ನಮ್ಮ ರಾಮನಾಥ!**

ಬಂಗಾರವನ್ನು ಒರೆಹಚ್ಚಿ ನೋಡಿ ಸುಂದರವಾದ ಆಭರಣವನ್ನು ಮಾಡುವಂತೆ, ಶ್ರೀಗಂಧವನ್ನು ಸಾಣೇಕಲ್ಲಿನ ಮೇಲೆ ಅರೆದು ಸುಗಂಧವನ್ನು ಮೈಗೆ ಲೇಪಿಸಿಕೊಂಡಂತೆ, ಕಬ್ಬನ್ನು ಗಾಣದಲ್ಲಿ ಹಾಕಿ ಅರೆದು ಸವಿಯಾದ ಬೆಲ್ಲವನ್ನು ಮಾಡಿದಂತೆ ದೇವರು ಭಕ್ತನಿಗೆ ಸಾಕಷ್ಟು ಕಷ್ಟಕೋಟಲೆಗಳನ್ನು ಕೊಟ್ಟು ಪರೀಕ್ಷಿಸಿ ಅವನ ವ್ಯಕ್ತಿತ್ವ ಹೊಳಪುಗೊಳ್ಳುವಂತೆ ಮಾಡುತ್ತಾನೆ. ಸತ್ಯಹರಿಶ್ಚಂದ್ರನ ಕಥೆಯನ್ನೇ ತೆಗೆದುಕೊಳ್ಳಿ. 'ಸತ್ಯವೆಂಬುದೆ ಹರನು, ಹರನೆಂಬುದೆ ಸತ್ಯ ಎರಡಿಲ್ಲ' ಎಂಬ ಜೀವನಾದರ್ಶದ ಹಿಂದೆ ಹರಿಶ್ಚಂದ್ರ ಪಟ್ಟ ಪಾಡೇನು ಸಾಮಾನ್ಯವೇ? ಶಾಲಾ ಮಕ್ಕಳಿಗೆ ಇದರ ನೀತಿಪಾಠ ಏನೆಂದು ಅಧ್ಯಾಪಕರೊಬ್ಬರು ಕೇಳಿದಾಗ 'ಸತ್ಯಹೇಳುವವರಿಗೆ ಸ್ಮಶಾನ ಕಾಯುವ ಹೊತ್ತು ಬರುತ್ತದೆ' ಎಂದು ಮಕ್ಕಳು ಪ್ರತಿಕ್ರಿಯಿಸಿದರಂತೆ! ಸತ್ಯಪಥ ತುಳಿಯುವವರಿಗೆ ಸಂಪತ್ತು ಸಿಗುತ್ತೋ ಇಲ್ಲವೋಃ ಸತ್ಯವೇ ಅವರಿಗೆ ಸಂಪತ್ತು.

ಸತ್ಯಕ್ಕೆ ನಾನಾ ಅರ್ಥಗಳಿವೆ. ಇದನ್ನು ಸ್ಥೂಲವಾಗಿ ಎರಡು ವಿಧವಾಗಿ ವಿಂಗಡಿಸಬಹುದು: ಒಂದು ಲೌಕಿಕ ಸತ್ಯ (emphirical truth) ಮತ್ತೊಂದು ಪಾರಲೌಕಿಕ ಸತ್ಯ (metaphysical truth). ಲೌಕಿಕ ಸತ್ಯವನ್ನು ಸುಲಭವಾಗಿ ಗ್ರಹಿಸಿದಂತೆ ಪಾರಲೌಕಿಕ ಸತ್ಯವನ್ನು ಅಷ್ಟು ಸುಲಭವಾಗಿ ಗ್ರಹಿಸಲು ಸಾಧ್ಯವಾಗುವುದಿಲ್ಲ. ಲೌಕಿಕ ಸತ್ಯ ಲೋಕವ್ಯವಹಾರದಲ್ಲಿ ಒಂದು ಘಟನೆಗೆ ಸಂಬಂಧಪಟ್ಟ ಮಾತಾದರೆ (rhetoric) ಪಾರಲೌಕಿಕ ಸತ್ಯ ಈ ಸೃಷ್ಟಿಯ ಆಚೆ ಇರುವ ಆತ್ಯಂತಿಕ ಸತ್ಯದ ಇರುವಿಕೆಗೆ (existence) ಸಂಬಂಧಪಟ್ಟ ವಿಚಾರ. ಲೌಕಿಕಸತ್ಯ ಪಾರಲೌಕಿಕ ಸತ್ಯದ ಸಾಕ್ಷಾತ್ಕಾರಕ್ಕೆ ನೆರವಾಗುವ ಜೀವನ ಮೌಲ್ಯ. ಒಟ್ಟಾರೆ ಇದ್ದುದನ್ನು ಇದ್ದಂತೆ ಹೇಳುವುದು ಸತ್ಯ. ಆದರೆ ಆ ಇರುವಿಕೆಯ ಗ್ರಹಿಕೆಯಲ್ಲಿ ವ್ಯತ್ಯಾಸವಾದರೆ ಯಾವುದು ಸರಿ, ಯಾವುದು ತಪ್ಪು, ಅದನ್ನು ಅಳೆಯುವ ಮಾನದಂಡ ಯಾವುದು ಎಂಬ ಪ್ರಶ್ನೆ ಉದ್ಭವಿಸುತ್ತದೆ. ಹೀಗಾಗಿ ಪಾರಲೌಕಿಕ ಸತ್ಯ ಕುರಿತಂತೆ ವಿಭಿನ್ನ ಧರ್ಮಗಳಲ್ಲಿ ಅನೇಕ ಸೈದ್ಧಾಂತಿಕ ವ್ಯತ್ಯಾಸಗಳುಂಟಾಗಿ ವಿಭಿನ್ನಮತಭೇದಗಳಿಗೆ ಎಡೆಮಾಡಿಕೊಟ್ಟಿದೆ. ಲೌಕಿಕ ಸತ್ಯ ಹಾಗಲ್ಲ. ಅದನ್ನು ಪತ್ತೆ ಹಚ್ಚಿ ಪ್ರಮಾಣೀಕರಿಸಬಹುದು. ದುಡ್ಡಿನಿಂದ ಅದನ್ನು ಮರೆಮಾಚಲು ಪ್ರಯತ್ನ ಮಾಡಿದರೂ ಸತ್ಯವನ್ನು ಶಾಶ್ವತವಾಗಿ ಮುಚ್ಚಿಡಲು ಸಾಧ್ಯವಿಲ್ಲ. 'ಹಿರಣ್ಮಯೇನ ಪಾತ್ರೇಣ ಸತ್ಯಸ್ಯಾಪಿಹಿತಂ ಮುಖಂ' ಅಂದರೆ ಬಂಗಾರದ ಬಿಂದಿಗೆಯಲ್ಲಿ ಸತ್ಯದ ಮುಖವು ಅಡಗಿದೆ ಎಂಬ ಅನುಭಾವದ ಮಾತೊಂದು ಬೃಹದಾರಣ್ಯಕ ಉಪನಿಷತ್ತಿನಲ್ಲಿ (5.15.1) ಬರುತ್ತದೆ. ಯಾವಾತನು ಹೊರಗೆ ಕಾಣಿಸುವ ಬಂಗಾರಕ್ಕೆ ಮಾರುಹೋಗುತ್ತಾನೋ ಅವನಿಗೆ ಸತ್ಯದ ಸಾಕ್ಷಾತ್ಕಾರವಾಗುವುದಿಲ್ಲ ಎಂಬುದು ಈ ಉಪನಿಷತ್ತಿನ ಜೀವನಸಂದೇಶ.

ಸತ್ಯವನ್ನು ಹೇಳುವವರು ಸತ್ವಪರೀಕ್ಷೆಗೆ ಒಳಗಾಗುತ್ತಾರೆ. ಜೀವನದಲ್ಲಿ ಸಂಕಷ್ಟಗಳನ್ನು ಎದುರಿಸಲು ಅವರು ಸಿದ್ಧರಾಗಬೇಕಾಗುತ್ತದೆ. ಮನೆಮಠಗಳನ್ನು ಕಳೆದುಕೊಂಡರೂ ಸತ್ಯವೇ ಅವರಿಗೆ ಮುಖ್ಯವಾಗುತ್ತದೆ. ಈ ವಿಷಯದಲ್ಲಿ ಅವರು ಎಂದೂ ರಾಜಿಮಾಡಿಕೊಳ್ಳಲು ಸಿದ್ಧರಾಗುವುದಿಲ್ಲ. ರಷ್ಯಾದ ಪ್ರಸಿದ್ಧ ಲೇಖಕ ಮತ್ತು ಚಿಂತಕ ಲಿಯೋ ಟಾಲ್‌ಸ್ಟಾಯ್ ಬರೆದ "God sees the truth but waits" (ದೇವರು ಸತ್ಯವನ್ನು ನೋಡುತ್ತಾನೆ ಆದರೆ ಕಾಯುತ್ತಾನೆ) ಎಂಬ ಕಥೆ ತುಂಬಾ ಮನಮಿಡಿಯುವಂತಹುದಾಗಿದೆ:

ರಷ್ಯಾದ ವ್ಲಾಡಿಮಿರ್ ಪಟ್ಟಣದಲ್ಲಿ ಆಕ್ಸಿನೋವ್ ಎಂಬ ಹೆಸರಿನ ಒಬ್ಬ ವ್ಯಾಪಾರಿ ಇದ್ದ. ತಲೆಯ ತುಂಬಾ ಗುಂಗುರುಕೂದಲು ಹೊಂದಿದ್ದ ಅವನು ನೋಡಲು ತುಂಬಾ ಸುಂದರವಾಗಿದ್ದ. ಅವನಿಗೆ ಸಂಗೀತದಲ್ಲಿ ಬಹಳ ಆಸಕ್ತಿ ಇತ್ತು. ದೂರದ ಇನ್ನೊಂದು ಪಟ್ಟಣದಲ್ಲಿ ಒಂದು ವಾಣಿಜ್ಯ ಮೇಳ ಏರ್ಪಾಡಾಗಿತ್ತು. ವ್ಯಾಪಾರಕ್ಕೊಂದು ಅಲ್ಲಿಗೆ ಹೊರಟು ನಿಂತ ಅವನನ್ನು ಹೆಂಡತಿ ತಡೆದಳು. ಹಿಂದಿನ ರಾತ್ರಿ ಆಕೆಗೆ ಒಂದು ದುಃಸ್ವಪ್ನ ಬಿದ್ದಿತ್ತು. ಅದರಲ್ಲಿ ಅವಳ ಗಂಡ ಮೇಳದಿಂದ ವಾಪಾಸ್ ಬರುವ ಹೊತ್ತಿಗೆ ಅವನ ತಲೆಗೂದಲೆಲ್ಲಾ ಬೆಳ್ಳಗಾಗಿದ್ದವು. ಆದಕಾರಣ ಈಗ ಹೋಗುವುದು ಬೇಡವೆಂದು ಆಕೆ ಪರಿಪರಿಯಾಗಿ ಕೇಳಿಕೊಂಡಳು. ಅವನು ನಕ್ಕು ಬಿಳಿಯ ಕೂದಲು ಶುಭಶಕುನ ಹೆದರಬೇಡ, ವ್ಯಾಪಾರ ಮುಗಿಸಿಕೊಂಡು ನಿನಗೆ ಒಳ್ಳೆಯ ಉಡುಗೊರೆಯನ್ನು ತರುವೆನೆಂದು ಹೇಳಿ ಕುದುರೆಯನ್ನೇರಿ ಹೊರಟೇಬಿಟ್ಟ. ಅರ್ಧ ದಾರಿ ಹೋದಾಗ ಅವನ ಸ್ನೇಹಿತನಾದ ಇನ್ನೊಬ್ಬ ವ್ಯಾಪಾರಿ ಸಿಕ್ಕ. ಇಬ್ಬರೂ ಒಂದೇ ಹೋಟೆಲ್‌ನಲ್ಲಿ ಅಕ್ಕಪಕ್ಕದ ಕೊಠಡಿಗಳಲ್ಲಿ ಉಳಿದುಕೊಂಡರು. ಬೆಳಗ್ಗೆ ನಸುಕಿನಲ್ಲಿಯೇ ಆಕ್ಸಿನೋವ್ ಎದ್ದು ಮುಂದೆ ಹೊರಟ. ಮಾರ್ಗಮಧ್ಯೆ ನಿಂತು ದಣಿದ ಕುದುರೆಗಳಿಗೆ ಹುಲ್ಲನ್ನು ಹಾಕಿದ. ಹತ್ತಿರದ ಹೋಟೆಲ್‌ನಲ್ಲಿ ಕುಳಿತು ಊಟಕ್ಕೆ ಆರ್ಡರ್ ಕೊಟ್ಟ. ಮಾಣಿ ಬರುವವರೆಗೂ ತನ್ನ ಗಿಟಾರ್ ಹೊರತೆಗೆದು ನುಡಿಸತೊಡಗಿದ. ಊಟವಾದ ನಂತರ ಸ್ವಲ್ಪಹೊತ್ತು ವಿಶ್ರಮಿಸಿಕೊಂಡ. ಇನ್ನೇನು ಮುಂದೆ ಹೊರಡಬೇಕು ಅಷ್ಟರೊಳಗೆ ಪೋಲೀಸರು ಬಂದು ಅವನನ್ನು ಬಂಧಿಸಿ ವಿಚಾರಣೆಮಾಡತೊಡಗಿದರು. ಹಿಂದಿನ ರಾತ್ರಿ ವಾಸವಾಗಿದ್ದ ಹೋಟೆಲ್‌ನಲ್ಲಿ ಅವನ ಸ್ನೇಹಿತನ ಕೊಲೆಯಾಗಿತ್ತು! ತನಗೇನೂ ಗೊತ್ತಿಲ್ಲ, ನಸುಕಿನಲ್ಲಿಯೇ ಎದ್ದು ಬಂದಿರುವುದಾಗಿ ಎಷ್ಟೇ ಹೇಳಿದರೂ ಪೋಲೀಸರು

ಅವನನ್ನು ಸಂಶಯದೃಷ್ಟಿಯಿಂದ ನೋಡಿ ಅವನ ಎಲ್ಲಾ ಸಾಮಾನು ಸರಂಜಾಮುಗಳನ್ನು ತಪಾಸಣೆಮಾಡತೊಡಗಿದರು. ಅವನ ಕೈಚೀಲದಲ್ಲಿ ರಕ್ತಸಿಕ್ತವಾದ ಒಂದು ಚಾಕು ದೊರೆಯಿತು. ಯಾರೋ ಅವನ ಸ್ನೇಹಿತನನ್ನು ಕೊಂದು ಆ ಚಾಕುವನ್ನು ಇವನ ಕೈಚೀಲದಲ್ಲಿ ಹಾಕಿದ್ದರು. ತಾನು ನಿರಪರಾಧಿಯೆಂದು ಎಷ್ಟೇ ಹೇಳಿಕೊಂಡರೂ ಕೇಳದ ಪೋಲೀಸ್ ಅಧಿಕಾರಿಗಳು ಅವನಿಗೆ ಕೈಕೋಳ ತೊಡಿಸಿ ಜೈಲಿಗೆ ಹಾಕಿದರು.

ವಿಷಯ ತಿಳಿದ ಅವನ ಹೆಂಡತಿ ತನ್ನ ಚಿಕ್ಕ ಮಕ್ಕಳೊಂದಿಗೆ ದುಃಖಿತಳಾಗಿ ಓಡೋಡಿ ಬಂದು ಜೈಲಿನಲ್ಲಿ ಗಂಡನನ್ನು ಭೇಟಿಯಾದಳು. ಗಂಡನ ತಲೆಗೂದಲನ್ನು ನೇವರಿಸುತ್ತಾ 'ನಿಜವಾಗಿ ಹೇಳು ನೀನು ಈ ಕೊಲೆ ಮಾಡಿಲ್ಲವೇ?' ಎಂದು ಕೇಳಿದಳು. ಹೆಂಡತಿಯೂ ಸಹ ತನ್ನ ಬಗ್ಗೆ ಅನುಮಾನಪಟ್ಟದ್ದನ್ನು ನೋಡಿ ಆಕ್ಸಿನೋವ್‌ನ ಮನಸ್ಸಿಗೆ ತುಂಬಾ ನೋವುಂಟಾಯಿತು. ಕೈಬೊಗಸೆಯಲ್ಲಿ ತನ್ನ ಮುಖವಿಟ್ಟುಕೊಂಡು ಅತ್ತನು. ಗಂಡನಿಂದ ಎಲ್ಲಾ ವೃತ್ತಾಂತವನ್ನು ತಿಳಿದುಕೊಂಡ ಹೆಂಡತಿ ಕೋರ್ಟಿಗೆ ಮನವಿ ಸಲ್ಲಿಸಿದರೂ ಬಿಡುಗಡೆಯಾಗಲಿಲ್ಲ. ದೇವರೊಬ್ಬನಿಗೇ ಸತ್ಯ ಏನೆಂದು ಗೊತ್ತು, ಅವನಿಗೇ ಮೊರೆಹೋಗಬೇಕು, ಜೈಲಿನಿಂದ ಬಿಡುಗಡೆಯಾಗಬೇಕೆಂದರೆ ಅವನ ಕೃಪೆಯಿಲ್ಲದೆ ಸಾಧ್ಯವಿಲ್ಲವೆಂದು ಆಕ್ಸಿನೋವ್ ಹೆಂಡತಿಗೆ ಹೇಳಿ ತಾನೂ ನಿತ್ಯ ದೇವರನ್ನು ಪ್ರಾರ್ಥಿಸತೊಡಗಿದ. ತಾನು ಮಾಡದ ತಪ್ಪಿಗೆ ಜೈಲಿನಲ್ಲಿ ಶಿಕ್ಷೆಯನ್ನು ಅನುಭವಿಸಬೇಕಾಗಿಬಂತು. ಅವನ ಮುಖದಲ್ಲಿದ್ದ ಮಂದಹಾಸ, ಜೀವನೋತ್ಸಾಹ ಎಲ್ಲಾ ಕುಗ್ಗಿಹೋಯಿತು. ಆದರೂ ದೇವರ ಮೇಲಿನ ನಂಬುಗೆಯನ್ನು ಅವನು ಕಳೆದುಕೊಳ್ಳಲಿಲ್ಲ. ಪ್ರತಿವಾರವೂ ಜೈಲಿನಲ್ಲಿದ್ದ ಚರ್ಚಿನಲ್ಲಿ ಭಾವಪರವಶನಾಗಿ ದೇವರ ಪ್ರಾರ್ಥನೆಯನ್ನು ಮಾಡುತ್ತಿದ್ದ. ಜೈಲಿನ ಇತರೆ ಕೈದಿಗಳ ಮಧ್ಯೆ ಉಂಟಾಗುತ್ತಿದ್ದ ಜಗಳಗಳನ್ನು ಬಗೆಹರಿಸಿ ಅವರ ಗೌರವಕ್ಕೆ ಪಾತ್ರನಾಗಿದ್ದ. ಎಲ್ಲರೂ ಅವನನ್ನು 'ಅಜ್ಜ', 'ಸಂತ' ಎಂದು ಕರೆಯುತ್ತಿದ್ದರು. ಅವನ ಸದ್ವರ್ತನೆಯನ್ನು ನೋಡಿ ಜೈಲಿನ ಅಧಿಕಾರಿಗಳೂ ಸಹ ಬಹಳವಾಗಿ ಅವನನ್ನು ಮೆಚ್ಚಿಕೊಂಡಿದ್ದರು.

26 ವರ್ಷಗಳು ಉರುಳಿದವು. ತಲೆಗೂದಲು ಬೆಳ್ಳಗಾದವು. ಉದ್ದನೆಯ ಬಿಳಿಯಗಡ್ಡ ಬೆಳೆಯತೊಡಗಿತು. ಮನೆಯಿಂದ ಯಾವುದೇ ಸುದ್ದಿ ಇರಲಿಲ್ಲ. ತನ್ನ ಹೆಂಡತಿ ಮಕ್ಕಳು ಹೇಗಿದ್ದಾರೆಂದು ತಿಳಿಯದೆ ತುಂಬಾ ಕೊರಗಿದ. ಮನಸ್ಸಿಗೆ ನೆಮ್ಮದಿ ಇರಲಿಲ್ಲ. ಮಾತನ್ನು ಕಡಿಮೆ ಮಾಡಿ ಅಂತರ್ಮುಖಿಯಾಗಿ ದೇವರನ್ನು ಧ್ಯಾನಿಸತೊಡಗಿದ. ಒಂದು ದಿನ ಹೊಸದಾಗಿ ಕೈದಿಗಳ ಒಂದು ತಂಡವೇ ಅವನಿದ್ದ ಜೈಲಿಗೆ ಬಂತು. ಸಂಜೆ ಹೊತ್ತು ಹಳೆಯ ಕೈದಿಗಳು ಹೊಸಕೈದಿಗಳನ್ನು ಸಂಧಿಸಿ ಯಾವ ಸ್ಥಳಗಳಿಂದ ಯಾವ ಅಪರಾಧಕ್ಕಾಗಿ ಅವರು ಜೈಲಿಗೆ ಬರುವಂತಾಯಿತು ಎಂದು ಕೇಳಿ ತಿಳಿದುಕೊಂಡರು. ಅವರಲ್ಲೊಬ್ಬ ತುಂಬಾ ದಢೂತಿಯಾದ ಆಸಾಮಿ ಇದ್ದ. ಆ ಕೈದಿಯ ಹೆಸರು ಮಕರ್ ಸ್ಯಾಮ್ಯೋನಿಚ್. ಅವನು ಆಕ್ಸಿನೋವ್‌ನ ಊರಿನವನೇ ಆಗಿದ್ದ. ಮಾತಿನ ಪ್ರಸಂಗದಲ್ಲಿ ಆ ಹೊಸ ಕೈದಿಯೇ ತನ್ನ ಸ್ನೇಹಿತನನ್ನು ಕೊಲೆ ಮಾಡಿದ ಕೊಲೆಗಾರನೆಂದು ಆಕ್ಸಿನೋವ್‌ಗೆ ತಿಳಿಯಿತು. ಎದ್ದು ಹೊರಟುಹೋದ. ರಾತ್ರಿಯೆಲ್ಲಾ ನಿದ್ರೆ ಬರಲಿಲ್ಲ. ಹೆಂಡತಿ ಮಕ್ಕಳ ನೆನಪಾಗಿ ಮನೆಯಿಂದ ಹೊರಟ ಕ್ಷಣದಿಂದ ಜೈಲು ಸೇರುವವರೆಗಿನ ಘಟನಾವಳಿಗಳು ಅವನ ಕಣ್ಣ ಮುಂದೆ ಹಾಯ್ದು ಕಾಡಿಸತೊಡಗಿದವು. ತನ್ನೆಲ್ಲ ಸಂಕಷ್ಟಗಳಿಗೆ ಕಾರಣನಾದ ಆ ಪಾಪಿಯನ್ನು ಕೊಂದು ಸೇಡು ತೀರಿಸಿಕೊಳ್ಳಬೇಕೆಂಬ ಆಲೋಚನೆ ಮನಸ್ಸಿನಲ್ಲಿ ತೀವ್ರವಾಗಿ ಸುಳಿದಾಡಿತು. ರಾತ್ರಿಯೆಲ್ಲಾ ದೇವರ ಧ್ಯಾನ ಮಾಡಿದ. ಹಗಲು ಹೊತ್ತು ಆ ಹೊಸ ಕೈದಿಯತ್ತ ಸುಳಿಯಲಿಲ್ಲ. ಎರಡು ವಾರ ಕಳೆದವು. ರಾತ್ರಿ ನಿದ್ರೆ ಬರುತ್ತಿರಲಿಲ್ಲ. ಮನಸ್ಸು ಉದ್ವಿಗ್ನಗೊಂಡಿತ್ತು; ಏನು ಮಾಡಬೇಕೆಂದು ತೋಚಲಿಲ್ಲ.

ಒಂದು ರಾತ್ರಿ ಜೈಲಿನೊಳಗೆ ಶತಪಥ ತಿರುಗುತ್ತಿದ್ದಾಗ ಆ ಹೊಸ ಕೈದಿ ಜೈಲಿನಿಂದ ತಪ್ಪಿಸಿಕೊಳ್ಳಲು ಸುರಂಗ ಕೊರೆಯುತ್ತಿರುವುದು ಆಕ್ಸಿನೋವ್‌ಗೆ ಕಾಣಿಸಿತು. ಕಂಡೂ ಕಾಣಿಸದಂತೆ ಮುನ್ನಡೆಯುತ್ತಿದ್ದ. ತಕ್ಷಣವೇ ಆ ಕೊಲೆಗಾರ ಅವನ ಕೈಹಿಡಿದು 'ಏಯ್ ಮುದುಕ, ಸುಮ್ಮನಿರು. ನನ್ನೊಂದಿಗೆ ನೀನೂ ಪಾರಾಗುವೆಯಂತೆ. ನೀನೇದರೂ ಈ ವಿಷಯವಾಗಿ ಬಾಯಿಬಿಟ್ಟರೆ ಅವರು ನನ್ನನ್ನು ಕೊಲ್ಲುತ್ತಾರೆ, ಅದಕ್ಕೆ ಮುಂಚೆ ನಾನು ನಿನ್ನನ್ನು ಕೊಂದುಬಿಡುತ್ತೇನೆ, ಹುಷಾರ್' ಎಂದು ಹೆದರಿಸಿದ. ಆಕ್ಸಿನೋವ್‌ಗೆ ಕೋಪ ಉಕ್ಕಿಬಂತು, ತಡೆಯಲಾಗಲಿಲ್ಲ. ಸಿಟ್ಟಿನಿಂದ ತನ್ನ ಕೈಯನ್ನು ಕೊಸರಿಕೊಂಡು 'ನನಗೆ ಇಲ್ಲಿಂದ ಪಾರಾಗುವ ಇಚ್ಛೆಯಿಲ್ಲ. ನೀನು ಎಂದೋ ನನ್ನನ್ನು ಕೊಂದಿರುವೆ; ಮತ್ತೆ ಕೊಲ್ಲುವ ಅವಶ್ಯಕತೆ ಇಲ್ಲ. ನಿನ್ನ ಕಾರಣಕ್ಕಾಗಿ ನಾನು 26 ವರ್ಷಗಳ ಕಾಲ ಜೈಲಿನಲ್ಲಿ ಶಿಕ್ಷೆ ಅನುಭವಿಸಿಯಾಗಿದೆ. ನನ್ನ ಹೆಂಡತಿ ಸತ್ತುಹೋಗಿದ್ದಾಳೆ. ಮಕ್ಕಳು ನನ್ನನ್ನು ಗುರುತಿಸುವುದಿಲ್ಲ. ಈಗ ನಾನೆಲ್ಲಿಗೆಂದು ಹೋಗಲಿ, ದೇವರ ಇಚ್ಛೆಯಂತೆ ಮಾಡುತ್ತೇನೆ' ಎಂದು ಕಟುವಾಗಿ ನುಡಿದ.

ಕಾರಾಗೃಹದಲ್ಲಿ ಸುರಂಗ ಕೊರೆಯುತ್ತಿರುವ ವಿಷಯ ಅದು ಹೇಗೋ ಜೈಲಿನ ಅಧಿಕಾರಿಗಳಿಗೆ ತಿಳಿಯಿತು. ಎಲ್ಲಾ ಕೈದಿಗಳನ್ನು ಸಾಲಾಗಿ ನಿಲ್ಲಿಸಿ ವಿಚಾರಣೆ ಮಾಡತೊಡಗಿದರು. ಕೊಲೆಗಾರ ಸ್ಯಾಮ್ಯೋನಿಚ್‌ನ ಭಯದಿಂದ ಯಾರೂ ತುಟಿಪಿಟಿಕ್ ಎನ್ನಲಿಲ್ಲ. ಅಧಿಕಾರಿಗಳು ಆಕ್ಸಿನೋವ್‌ನತ್ತ ತಿರುಗಿ 'ದೇವರ ಸಾಕ್ಷಿಯಾಗಿ ಹೇಳು, ಯಾರು ಸುರಂಗ ಕೊರೆಯುತ್ತಿದ್ದವರು ಹೇಳು' ಎಂದು ಒತ್ತಾಯಪಡಿಸಿದರು. ಅವನ ತುಟಿಗಳು ಅದುರಿದವು, ಕೈಗಳು ನಡುಗತೊಡಗಿದವು. ಬಹಳ ಹೊತ್ತು ಅವನ ಬಾಯಿಂದ ಮಾತೇ ಹೊರಡಲಿಲ್ಲ. ಮನಸ್ಸಿನಲ್ಲಿ ದ್ವಂದ್ವ, ತಳಮಳ. ವಿನಾ ಕಾರಣ ನನ್ನ ಜೀವನ ಹಾಳುಮಾಡಿದವನಿಗೆ ಶಿಕ್ಷೆ ಆಗಲೇಬೇಕು ಎಂದು ಒಂದು ಮನಸ್ಸು; ಹಾಗೆ ಅವನಿಗೆ ಶಿಕ್ಷೆ ಕೊಡಿಸುವುದರಿಂದ ನನಗೆ ಈಗ ಆಗುವುದೇನಿದೆ ಎಂದು ಇನ್ನೊಂದು ಮನಸ್ಸು. ಕೊನೆಗೆ ಏನೂ ಹೇಳಬಾರದೆಂದು ತೀರ್ಮಾನಿಸಿಕೊಂಡು 'ನನ್ನನ್ನು ಒತ್ತಾಯಪಡಿಸಬೇಡಿ, ನಾನು ಏನನ್ನೂ ಹೇಳಲಾರೆ, ಏನಾದರೂ ಶಿಕ್ಷೆ ಕೊಡುವುದಿದ್ದರೆ ನನಗೆ ಕೊಡಿ' ಎಂದು ಹೇಳಿದ. ತನಿಖೆ ಅಲ್ಲಿಗೇ ನಿಂತಿತು.

ತಾನು ಮಾಡಿದ ಕೊಲೆಯಿಂದ ನಿರಪರಾಧಿಯಾದ ಈತನು ಶಿಕ್ಷೆ ಅನುಭವಿಸುತ್ತಿರುವುದನ್ನು ನೋಡಿ ಹೊಸ ಕೈದಿಗೆ ಪಶ್ಚಾತ್ತಾಪ ಉಂಟಾಯಿತು. ಅಷ್ಟೆಲ್ಲಾ ಶಿಕ್ಷೆ ಅನುಭವಿಸಿಯೂ ತನ್ನ ಮೇಲೆ ಯಾವುದೇ ಪ್ರತೀಕಾರಭಾವನೆಯನ್ನು ತಾಳದೆ ವಿಷಯ ಗೊತ್ತಿದ್ದರೂ ತನಿಖಾಧಿಕಾರಿಗಳಿಗೆ ಹೇಳದಿರುವುದು ಅವನ ಮನಸ್ಸನ್ನು ಕರಗಿಸಿತು. ರಾತ್ರಿ ಆಕ್ಸಿನೋವ್ ಹಾಸಿಗೆಯ ಮೇಲೆ ಮಲಗಿ ಚಿಂತಿಸುತ್ತಿದ್ದಾಗ ಕೊಲೆಗಾರ ಸ್ಯಾಮ್ಯೋನಿಚ್ ಬಂದು ಅವನ ಕಾಲು ಹಿಡಿದುಕೊಂಡು ಕ್ಷಮೆ ಯಾಚಿಸಿದ. 'ಇಪ್ಪತ್ತಾರು ವರ್ಷಗಳ ಹಿಂದೆ ನಿನ್ನ ಸ್ನೇಹಿತನನ್ನು ಕೊಂದ ಪಾಪಿ ನಾನು. ನಿನ್ನನ್ನೂ ಕೊಲ್ಲಬೇಕೆಂದಿದ್ದೆ, ಆದರೆ ಅಷ್ಟರೊಳಗೆ ಹೊರಗಡೆ ಏನೋ ಶಬ್ದ ಕೇಳಿಸಿದ್ದರಿಂದ ಚಾಕುವನ್ನು ನಿನ್ನ ಕೈಚೀಲದಲ್ಲಿ ಬಚ್ಚಿಟ್ಟು ಕಿಟಕಿಯ

ಮುಖಾಂತರ ಪರಾರಿಯಾದೆ, ದಯವಿಟ್ಟು ನನ್ನನ್ನು ಕ್ಷಮಿಸು' ಎಂದು ಮತ್ತೆ ಕ್ಷಮೆ ಯಾಚಿಸಿದ. ಆಕ್ಸಿನೋವ್‌ಗೆ ಏನು ಹೇಳಬೇಕೆಂದು ತಿಳಿಯದೆ ಕ್ಷಣಕಾಲ ಮೌನ ಧರಿಸಿದ. ಹೊಸ ಕೈದಿ ಸೀದಾ ಜೈಲು ಅಧಿಕಾರಿಗಳ ಮುಂದೆ ಹಾಜರಾಗಿ ತಾನೇ ಆ ವ್ಯಾಪಾರಿಯ ಕೊಲೆಗಾರನೆಂದು ತಪ್ಪೊಪ್ಪಿಗೆ ನೀಡಿದ. ಕೋರ್ಟಿನಿಂದ ಆಕ್ಸಿನೋವ್‌ಗೆ ಬಿಡುಗಡೆ ಆದೇಶ ಬಂತು. ಆದರೆ ಕೋರ್ಟ್ ಆದೇಶ ಬರುವ ಹೊತ್ತಿಗೆ ನಿರಪರಾಧಿಯಾದ ಅವನ ಪ್ರಾಣಪಕ್ಷಿ ಇಹಲೋಕದಿಂದಲೇ ಬಿಡುಗಡೆಹೊಂದಿ ಹಾರಿಹೋಗಿತ್ತು!

**3.6.2009**

**ಶ್ರೀ ತರಳಬಾಳು ಜಗದ್ಗುರು**
**ಡಾ॥ ಶಿವಮೂರ್ತಿ ಶಿವಾಚಾರ್ಯ ಮಹಾಸ್ವಾಮಿಗಳವರು**
**ಸಿರಿಗೆರೆ**

❑